ಮಕ್ಕಳಿಗೆ ಕೂಡ. ಪ್ರಧಾನಮಂತ್ರಿಗಳು ನಾಗಾ ಸಮಸ್ಯೆಯನ್ನು ಗೊಂದಲಮಯಗೊಳಿಸಿದ್ದಾರೆ. ಈಗ ದ್ರಾವಿಡ ಸಮಸ್ಯೆಯನ್ನು ಇನ್ನಷ್ಟು ಕೆಡಿಸಲು ಆರಂಭಿಸಿದ್ದಾರೆ. ಏಕೆಂದರೆ ತಾಯಿ ಭಾರತಿ ತನ್ನ ಬಂಡುಕೋರ ಮಕ್ಕಳಿಗೆ ಶಿಕ್ಷೆ ಕೊಟ್ಟರೂ ಸಹ ಅವರನ್ನು ಅತೀವ ಪ್ರೀತಿಯಿಂದ ಕಾಣುತ್ತಾಳೆ ಎಂಬುದು ಈ ಪ್ರಧಾನಿಗೆ ಗೊತ್ತಿಲ್ಲ.'

ಲೋಹಿಯಾ ಈ ಮಾತನ್ನು ಹೇಳಿದ ಕಾಲದಲ್ಲಿ ತಮಿಳುನಾಡಿನಲ್ಲಿ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ನೇತೃತ್ವದ 'ಸ್ವಮರ್ಯಾದೈ' ಚಳುವಳಿ ತೀವ್ರ ಸ್ಥಿತಿಯಲ್ಲಿತ್ತು. 77ನೆಯ ವಯಸ್ಸಿನಲ್ಲಿ ಪೆರಿಯಾರ್‌ಗೆ ಆರು ತಿಂಗಳ ಶಿಕ್ಷೆಯಾಗಿತ್ತು. ಪೆರಿಯಾರ್ ಮದ್ರಾಸಿನ ಜೈಲಿನಲ್ಲಿದ್ದರು.

ಪೆರಿಯಾರ್ ಭೇಟಿಗೆ ಲೋಹಿಯಾ ಹೋದರು. ಪೆರಿಯಾರ್ ಆರೋಗ್ಯ ಕೆಟ್ಟಿತ್ತು; ಅವರನ್ನು ಜನರಲ್ ಆಸ್ಪತ್ರೆಗೆ ಸೇರಿಸಲಾಗಿತ್ತು.

ಇದೊಂದು ಚಾರಿತ್ರಿಕ ಭೇಟಿಯಾಗಿತ್ತು. ಲೋಹಿಯಾ ಹಿಂದಿಯಲ್ಲಿ ಮಾತಾಡುತ್ತಿದ್ದರು; ಪೆರಿಯಾರ್ ತಮಿಳಿನಲ್ಲಿ ಮಾತಾಡುತ್ತಿದ್ದರು. ನರಹರಿ ದುಭಾಷಿಯಾಗಿದ್ದರು. ಹಸನ್ ನಯೀಂ ಸುರಕೋಡ ಕನ್ನಡಿಸಿದ ಈ ಮಾತುಕತೆಯ ಭಾಗಗಳು:

ಲೋಹಿಯಾ: ತುಂಬ ದಿನಗಳಿಂದ ನಿಮ್ಮನ್ನು ಕಾಣಬೇಕೆಂದಿತ್ತು. ಸಾಧ್ಯವಾಗಿರಲಿಲ್ಲ. ಈ ಸಲ ಮದ್ರಾಸಿಗೆ ಬಂದ ಒಂದೇ ಕಾರಣವೆಂದರೆ ನಿಮ್ಮನ್ನು ಭೇಟಿಯಾಗುವುದು.

ಪೆರಿಯಾರ್: ನಿಮ್ಮನ್ನು ಕಂಡು ಸಂತೋಷವಾಯಿತು. ನನ್ನ ತಲೆಯ ಮೇಲಿದ್ದ ದೊಡ್ಡ ಹೊರೆ ಇಳಿದಂತಾಯಿತು.

ಲೋಹಿಯಾ: ನಿಮ್ಮ ಆರೋಗ್ಯ ಹೇಗಿದೆ?

ಪೆರಿಯಾರ್: ಪರವಾಗಿಲ್ಲ. ನನ್ನ ಆದರ್ಶಗಳಿಗೋಸ್ಕರ ನಾನು ಜೈಲಿನಲ್ಲಿರಬೇಕಾಗಿದೆ.

ಲೋಹಿಯಾ: ನಿಮ್ಮ ವಯಸ್ಸಿನ ವ್ಯಕ್ತಿ ಜೈಲಿನಲ್ಲಿರಕೂಡದು.

ಈ ಮಾತುಕತೆಯಲ್ಲಿ ದೇಶದ ಕಾನೂನು ವ್ಯವಸ್ಥೆ ಅತ್ಯಂತ ಕೀಳುಮಟ್ಟಕ್ಕಿಳಿದಿದೆ; ಇಲ್ಲಿ ಕಾನೂನು ನ್ಯಾಯವನ್ನಾಧರಿಸದೆ ಕೆಲವು ವ್ಯಕ್ತಿಗಳ ಬೇಕು, ಬೇಡಗಳನ್ನವಲಂಬಿಸಿ ರೂಪುಗೊಂಡಿದೆ ಎಂಬುದು ಇಬ್ಬರ ಅಭಿಪ್ರಾಯವೂ ಆಗಿತ್ತು.

ನಾಯ್ಕರ್: ನನ್ನ ಅನುಯಾಯಿಗಳನ್ನು ಹಿಂಸೆಗಿಳಿಯಲು ನಾನೆಂದೂ ಪ್ರಚೋದಿಸಿಲ್ಲ. ಶಾಂತ ರೀತಿಯ ಮಾರ್ಗಗಳಿಂದ ಬ್ರಾಹ್ಮಣತ್ವವನ್ನು ನಿರ್ಮೂಲನಗೊಳಿಸದಿದ್ದಲ್ಲಿ ಜನ ಹಿಂಸೆಗಿಳಿದರೆ ಆಶ್ಚರ್ಯಪಡಬೇಕಾಗಿಲ್ಲ ಎಂದಷ್ಟೆ ನಾನು ಹೇಳಿದ್ದೆ. ತಿರುಚಿನಾಪಳ್ಳಿಯ ಸಭೆಯಲ್ಲಿ ಮಾತನಾಡುತ್ತಾ ಪ್ರಧಾನಿಗಳು ನನ್ನನ್ನು 'ಹುಚ್ಚ' ಎಂದಿದ್ದಾರೆ. ನನ್ನನ್ನು ಗರಿಷ್ಠ ಶಿಕ್ಷೆಗೆ ಗುರಿಪಡಿಸಬೇಕು ಎಂದು ಹೇಳಿ ನನಗೆ ಅನ್ಯಾಯ ಮಾಡಿದ್ದಾರೆ.

ಲೋಹಿಯಾ: ನಿಜವಾಗಿಯೂ ನಿಮಗೆ ಅನ್ಯಾಯವಾಗಿದೆ. ನೆಹರೂ ವಿರುದ್ಧ ನ್ಯಾಯಾಲಯ ನಿಂದನೆಯ ಮೊಕದ್ದಮೆ ಹೂಡಬಹುದು. ಯಾಕೆಂದರೆ ಅವರು ಈ ಭಾಷಣ ಮಾಡಿದಾಗ ನ್ಯಾಯಾಲಯದಲ್ಲಿ ನಿಮ್ಮ ಪ್ರಕರಣದ ವಿಚಾರಣೆ ನಡೆದಿತ್ತು. ನಿಮ್ಮನ್ನಿಲ್ಲಿ ಕಾಣಲು ಬಂದ ಇನ್ನೊಂದು ಕಾರಣವೆಂದರೆ, ಪ್ರಧಾನಿಯವರ ಹೇಳಿಕೆಯ ವಿರುದ್ಧ ನನ್ನ ಪ್ರತಿಭಟನೆಯನ್ನು ದಾಖಲಿಸುವುದು; 'ಈ ವಿಷಯದಲ್ಲಿ ಉತ್ತರ ಭಾರತದಲ್ಲಿ ಬಹಳಷ್ಟು ಮಂದಿ ನನ್ನ ಹಾಗೆ ಯೋಚಿಸುತ್ತಾರೆ; ನೆಹರೂರಂತೆ ಅಲ್ಲ' ಎನ್ನುವುದನ್ನು ನಿಮಗೆ ಮನವರಿಕೆ ಮಾಡಿಕೊಡುವುದು.

ದೇಶ ಎದುರಿಸುತ್ತಿರುವ ಸಮಸ್ತ ಸಮಸ್ಯೆಗಳ ಬಗ್ಗೆ ನೀವು ಆಲೋಚಿಸಬೇಕೆಂಬುದು ನನ್ನ ಅಪೇಕ್ಷೆ. ನೀವು ಜಾತಿಪದ್ಧತಿಯ ನಿರ್ಮೂಲನ ಮಾಡಲು ಬಯಸುತ್ತಿದ್ದೀರಿ. ಅದು ಒಳ್ಳೆಯದೇ. ಆದರೆ ಅದರ ವಿರುದ್ಧದ ಆಂದೋಲನ ವ್ಯಕ್ತಿಗತವಾಗಿ ಬ್ರಾಹ್ಮಣರ ವಿರುದ್ಧ ಇರಬಾರದು.

ನಾಯ್ಕರ್: ನನಗೂ ಹಿಂಸೆಗೂ ಸಂಬಂಧವಿಲ್ಲ. ಇದು ಸತ್ಯ. ಮದ್ರಾಸಿನ ಪತ್ರಿಕೋದ್ಯಮ ಬ್ರಾಹ್ಮಣರ ಕೈಯಲ್ಲಿದೆ. ಅವರು ನನ್ನ ತೇಜೋವಧೆ ಮಾಡಬೇಕೆಂದಿದ್ದಾರೆ.

ಲೋಹಿಯಾ: ಹಿಂಸೆಯನ್ನು ಪ್ರಚೋದಿಸಕೂಡದು ಎಂದಷ್ಟೇ ಹೇಳಿದರೆ ಸಾಲದು. ವ್ಯಕ್ತಿಗತವಾಗಿ ಬ್ರಾಹ್ಮಣರ ವಿರುದ್ಧ ಹಿಂಸೆ ನಡೆಯಕೂಡದು ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ನಾಯ್ಕರ್: ಹಿಂಸೆಯು ಬ್ರಾಹ್ಮಣರು ಮತ್ತು ನನ್ನ ಪಕ್ಷ ಎರಡನ್ನೂ ನಾಶಪಡಿಸಬಲ್ಲದೆನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ನಾನು ಬದುಕಿರುವವರೆಗೂ ಹಾಗಾಗುವುದಿಲ್ಲ.

ಲೋಹಿಯಾ: ಜಾತಿ ನಿರ್ಮೂಲನ ಮಾಡಬಯಸುವ ಹೋರಾಟದ ವಿಷಯದಲ್ಲಿ ನಾನು ನಿಮ್ಮ ಜೊತೆಗಿದ್ದೇನೆ. ನಿಮ್ಮೊಂದಿಗೆ ಜೈಲಿಗೆ ಹೋಗಲೂ ಸಿದ್ಧನಿದ್ದೇನೆ. ಜಾತಿಯ ನಾಮಫಲಕಗಳನ್ನು ಕಿತ್ತೆಸೆಯಲು ಹೋರಾಟ ನಡೆದರೆ ಅದನ್ನೂ ಸ್ವಾಗತಿಸುತ್ತೇನೆ. ಇದು ಸಾಧ್ಯವಾಗುವುದು ನೀವು ನಿಮ್ಮ ಈ ಬೇಡಿಕೆಗಳನ್ನು, ಕಾರ್ಯಕ್ರಮಗಳನ್ನು ಬಿಟ್ಟು ಕೊಟ್ಟಾಗ ಮಾತ್ರ. ಅವು ಯಾವುವೆಂದರೆ, ದ್ರಾವಿಡ ಸ್ಥಾನದ ಬೇಡಿಕೆಯನ್ನೊಳಗೊಂಡ ಉತ್ತರ ಭಾರತದ ವಿರೋಧಿ ಆಂದೋಲನ; ಹಿಂದಿ ವಿರೋಧಿ ಆಂದೋಲನ; ಗಾಂಧೀಜಿಯ ಭಾವಚಿತ್ರಗಳನ್ನು ಸುಡುವುದು; ವ್ಯಕ್ತಿಗತವಾಗಿ ಬ್ರಾಹ್ಮಣರ ವಿರುದ್ಧ ಹಿಂಸೆ.

ಅಂಬೇಡ್ಕರ್ ಜೊತೆಗಿನ ಪತ್ರ ವ್ಯವಹಾರದಂತೆಯೇ ಪೆರಿಯಾರ್ ಭೇಟಿಯೂ ಲೋಹಿಯಾ ಆಲೋಚನೆಗಳನ್ನು ವಿಸ್ತರಿಸಿತು; ದಲಿತ, ಹಿಂದುಳಿದ ವರ್ಗಗಳ ರಾಜಕಾರಣವನ್ನು ಹೊಸದಾಗಿ ವಿವರಿಸಿಕೊಳ್ಳಲು ಇವೆರಡೂ ಸಂವಾದಗಳು ನೆರವಾದವು. ಹಿಂದುಳಿದ ವರ್ಗಗಳಿಗೆ ಮೀಸಲಾತಿಯ ಅಗತ್ಯದ ಬಗ್ಗೆ ಲೋಹಿಯಾ ಮಾತಾಡತೊಡಗಿದರು. ಸಮಾಜವಾದಿ ಪಕ್ಷ ಈ ಬಗ್ಗೆ ಸ್ಪಷ್ಟ ನಿಲುವು ತಳೆಯಿತು:

'ಜಾತಿಪದ್ಧತಿ ಸಂಪೂರ್ಣ ನಾಶವಾಗುವವರೆಗೆ ಭಾರತದ ಪುನರ್ರಚನೆಗೆ ಮೆರಿಟ್ ಬದಲು ಆದ್ಯತೆಯ ಅವಕಾಶ, ಅಂದರೆ ಮೀಸಲಾತಿ, ಬುನಾದಿಯಾಗತಕ್ಕದ್ದು ಎಂದು ಸಮಾಜವಾದಿ ಪಕ್ಷದ ಸಮ್ಮೇಳನವು ಘೋಷಿಸುತ್ತದೆ. ಮಹಿಳೆಯರು, ಶೂದ್ರರು, ದಲಿತರು, ಮುಸಲ್ಮಾನರು, ಕ್ರಿಶ್ಚಿಯನ್ನರು ಹಾಗೂ ಆದಿವಾಸಿಗಳು ಇಡೀ ಜನಸಂಖ್ಯೆಯ ಶೇ. 85ಕ್ಕೂ ಹೆಚ್ಚು ಇದ್ದಾರೆ. ಆದರೆ ರಾಜಕೀಯ, ಸೈನ್ಯ, ವ್ಯಾಪಾರ, ಸರಕಾರದ ಉನ್ನತ ಹುದ್ದೆಗಳು – ಈ ನಾಲ್ಕೂ ನಿರ್ಣಾಯಕ ಕ್ಷೇತ್ರಗಳಲ್ಲಿ ಅವರು ಶೇ. 10ಕ್ಕೂ ಕಡಿಮೆಯಿದ್ದಾರೆ.

ಈ ವ್ಯತ್ಯಾಸವನ್ನು ಸರಿಪಡಿಸದ ಹೊರತು

## ಕಳೆದ ಸಂಚಿಕೆಯಲ್ಲಿ



ಲೋಹಿಯಾ ಮತ್ತು ರಮಾ ಮಿತ್ರ ಅವರ ನಂಟು ಭಾವುಕತೆಯೊಂದಿಗೆ ಬೌದ್ಧಿಕ ಸಹಚರ್ಯದ್ದೂ ಆಗಿತ್ತು. ಒಬ್ಬರ ಬೆಳವಣಿಗೆಗೆ ಮತ್ತೊಬ್ಬರು ಪ್ರೇರಣೆಯಾಗಿದ್ದರು. ಪತ್ರಗಳ ಮೂಲಕವೂ ಗಾಢವಾಗಿ ಬೆಳೆದ ಈ ಅನುಬಂಧ ಇಬ್ಬರಲ್ಲೂ ಆತ್ಮವಿಶ್ವಾಸ, ಸ್ಥೈರ್ಯ ವೃದ್ಧಿಸುವಂತಿತ್ತು. ಕೃಷ್ಣನ ಕುರಿತ ಲೋಹಿಯಾ ಅವರ ಅಪೂರ್ವ ಬರಹದ ಭಿತ್ತಿಯಲ್ಲಿ ಅವರು ರಮಾ ಅವರೊಂದಿಗೆ ನಡೆಸಿದ ಸಂವಾದದ ನೆರಳು ಇರುವಂತಿದೆ. ಪ್ರಾಧ್ಯಾಪಕಿಯಾಗಿದ್ದ ರಮಾ ಒಳ್ಳೆಯ ಲೇಖಕಿಯೂ ಆಗಬೇಕೆನ್ನುವುದು ಲೋಹಿಯಾ ಆಸೆಯಾಗಿತ್ತು. ಪಿಎಚ್‌ಡಿ. ಅಧ್ಯಯನಕ್ಕೆಂದು ವಿದೇಶಕ್ಕೆ ಹೊರಟ ಗೆಳತಿಗೆ ತಮ್ಮಿಂದ ಸಾಧ್ಯವಾದ ನೆರವು ಒದಗಿಸಿಕೊಟ್ಟರು. ಇಬ್ಬರೂ ಕಡಲಿನ ಆಚೀಚೆ ಇದ್ದಾಗಲೂ ಪತ್ರವ್ಯವಹಾರ ನಡೆದೇ ಇತ್ತು. 1957ರ ಚುನಾವಣೆಗಳಲ್ಲಿನ ಸೋಲು ಲೋಹಿಯಾ ಮತ್ತು ಜೆ.ಪಿ. ಇಬ್ಬರಿಗೂ ತಮ್ಮ ಹಾದಿಗಳ ಅವಲೋಕನಕ್ಕೆ ಅವಕಾಶ ಕಲ್ಪಿಸಿತು. ಸೋತ ಎರಡೂ ಪಕ್ಷಗಳನ್ನು ಒಗ್ಗೂಡಿಸಬೇಕೆಂದು ಜೆ.ಪಿ. ಬಯಸಿದರು. ಎರಡೂ ಕಡೆಗಳಲ್ಲಿನ ಗೊಂದಲಗಳಿಂದಾಗಿ ವಿಲೀನ ಸಾಧ್ಯವಾಗಲಿಲ್ಲ. ಆದರೆ, ದೇಶದಲ್ಲಿ ಗಟ್ಟಿ ವಿರೋಧ ಪಕ್ಷವೊಂದನ್ನು ರೂಪಿಸಲು ಸವಾಲನ್ನು ಲೋಹಿಯಾ ಕೈಬಿಡಲಿಲ್ಲ.